

ಕರ್ನಾಟಕ ಸರ್ಕಾರ

**ಸಾರ್ವಜನಿಕ ಶಿಕ್ಷಣ ಇಲಾಖೆಯ ಆಯುಕ್ತರ ಕಛೇರಿ, ನೃಪತುಂಗ ರಸ್ತೆ, ಬೆಂಗಳೂರು**

**ಸಂಖ್ಯೆ : ಸಂಖ್ಯೆ : ಸಿ5(2)ಪವ್ಯಬ.35/2020-21** ದಿನಾಂಕ:**12-01-2021.**

**ಜ್ಞಾಪನಾ**

ವಿಷಯ :- ಸಾರ್ವಜನಿಕ ಶಿಕ್ಷಣ ಇಲಾಖೆಯ ಅಧೀಕ್ಷಕರುಗಳಿಗೆ ಪತ್ರಾಂಕಿತ ವ್ಯವಸ್ಥಾಪಕರು / ಸಹಾಯಕ ನಿರ್ದೇಶಕರು (ಬೋಧಕೇತರ)ಹುದ್ದೆಗೆ ಪದೋನ್ನತಿ ನೀಡಿರುವುದನ್ನು ಮುಂದೂಡಲು ಅವಕಾಶ ಕಲ್ಪಿಸಿರುವ ಬಗ್ಗೆ.

ಉಲ್ಲೇಖ :- ಸರ್ಕಾರದ ಆದೇಶ ಸಂಖ್ಯೆ : ಡಿಪಿಎಆರ್ 12 ಎಸ್‌ಡಿಇ 2005 ದ: 29-01-2008.

2 :- ಸರ್ಕಾರದ ಆದೇಶ ಸಂಖ್ಯೆ : ಇಡಿ 464 ಡಿಪಿಐ 2008 ದಿ : 06-01-2009.

3 :- ದಿನಾಂಕ : 02-01-2021 ರಂದು ನಡೆದ ಇಲಾಖಾ ಮುಂಬಡ್ತಿ ಸಮಿತಿಯ ಸಭಾ ನಡವಳಿಗಳು.

4:- ಈ ಕಛೇರಿಯ ಅಧಿಸೂಚನೆ ಸಂಖ್ಯೆ **ಸಿ5(2) ಪವ್ಯಬ.35/2020-21** ದಿನಾಂಕ: **02-01-2021**

5:- ನೌಕರರಿಂದ ಬಂದ ಮನವಿಗಳು.

6:- ಸರ್ಕಾರದ ಪತ್ರದ ಸಂಖ್ಯೆ: ಡಿಪಿಎಆರ್ 57 ಎಸ್‌ಆರ್‌ಆರ್ 2001 ದಿನಾಂಕ: 22-05-2002.

* * * * * *

**ಪ್ರಸ್ತಾವನೆ:-**

ಬೆಂಗಳೂರು ಆಯುಕ್ತಾಲಯದ ಆಡಳಿತ ವ್ಯಾಪ್ತಿಯಲ್ಲಿ ಬರುವ ಪತ್ರಾಂಕಿತ ವ್ಯವಸ್ಥಾಪಕರ / ಸಹಾಯಕ ನಿರ್ದೇಶಕರು (ಬೋಧಕೇತರ) ಹುದ್ದೆಗಳಲ್ಲಿ ಪ್ರಸ್ತುತ ಖಾಲಿ ಇರುವ ಹುದ್ದೆಗಳಿಗೆ ಅಧೀಕ್ಷಕರ ಹುದ್ದೆಯಿಂದ ವೃಂದ ಮತ್ತು ನೇಮಕಾತಿ ನಿಯಮಾವಳಿಗಳಂತೆ ಸ್ಥಾನಪನ್ನ ಬಡ್ತಿಯನ್ನು ನೀಡುವ ಸಲುವಾಗಿ ದಿನಾಂಕ : 02-01-2012 ರಂದು ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು ಇವರ ಅಧ್ಯಕ್ಷತೆಯಲ್ಲಿ ಇಲಾಖಾ ಮುಂಬಡ್ತಿಯ ಸಭೆಯನ್ನು ನಡೆಸಲಾಯಿತು.

ಉಲ್ಲೇಖ [4] ರಂತೆ ಸಾರ್ವಜನಿಕ ಶಿಕ್ಷಣ ಇಲಾಖೆಯ ಗ್ರೂಪ್ 'ಸಿ' ವೃಂದದ ವೇತನ ಶ್ರೇಣಿ ರೂ. 37900-70850 ರಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಅಧೀಕ್ಷಕರುಗಳಿಗೆ ಗ್ರೂಪ್ 'ಬಿ' ವೃಂದದ ವೇತನ ಶ್ರೇಣಿ ರೂ. 40900-78200 ರ ಪತ್ರಾಂಕಿತ ವ್ಯವಸ್ಥಾಪಕರು/ಸಹಾಯಕ ನಿರ್ದೇಶಕರು (ಬೋಧಕೇತರ) ಹುದ್ದೆಗಳಿಗೆ ಸ್ಥಾನಪನ್ನ ಬಡ್ತಿಯನ್ನು ನೀಡಿ ಆದೇಶಿಸಲಾಗಿತ್ತು.

ಉಲ್ಲೇಖ [4] ರಂತೆ ಬಡ್ತಿ ನೀಡಲಾದ ನೌಕರರು ಬಡ್ತಿಯನ್ನು ಹೊಂದಲು ಇಚ್ಛಿಸದಿದ್ದರೆ, ಬಡ್ತಿ ಆದೇಶ ಹೊರಡಿಸಿದ ದಿನಾಂಕದಿಂದ 07 ದಿನಗಳ ಒಳಗೆ ನೀಡಲಾದ ಬಡ್ತಿಯನ್ನು ಕರ್ನಾಟಕ ಸಿವಿಲ್ ಸೇವಾ [ಸಾಮಾನ್ಯ ನೌಕರಿ ಭರ್ತಿ] ನಿಯಮಗಳು-1977ರ ನಿಯಮ 4ಎ ರಂತೆ ಬಿಟ್ಟುಕೊಡಲು ನೇಮಕ ಪ್ರಾಧಿಕಾರ ಅನುಮತಿಯನ್ನು ಕೋರಿ ಲಿಖಿತ ಕೋರಿಕೆ ಸಲ್ಲಿಸಲು ತಿಳಿಸಿ, ದಿನಾಂಕ:02-01-2012 ರಿಂದ 08-01-2021 ಅವಕಾಶವನ್ನು ನೀಡಲಾಗಿತ್ತು.

ದಿನಾಂಕ:02-01-2021 ರ ಅಧಿಸೂಚನೆಯಲ್ಲಿ ನೀಡಿರುವ 18 ಮಂದಿ ನೌಕರರಲ್ಲಿ ಒಟ್ಟು 04 ಮತ್ತು ಬಡ್ತಿ ನೀಡುವ ಮೊದಲೇ ಓರ್ವ ನೌಕರರು ಸೇರಿದಂತೆ ಒಟ್ಟಾರೆ 05 ಅಧಿಕಾರಿಗಳು ಉಲ್ಲೇಖ [5] ರಲ್ಲಿ

ಬಡ್ತಿಯನ್ನು ಕರ್ನಾಟಕ ಸಿವಿಲ್ ಸೇವಾ [ಸಾಮಾನ್ಯ ನೌಕರಿ ಭರ್ತಿ] ನಿಯಮಗಳು–1977ರ ನಿಯಮ 4ಎ ರಂತೆ ಬಿಟ್ಟುಕೊಡಲು ಮನವಿಗಳನ್ನು ಸಲ್ಲಿಸಿರುತ್ತಾರೆ. ಇವರ ಮನವಿಗಳನ್ನು ಪರಿಶೀಲಿಸಿ, ಪತ್ರಾಂಕಿತ ವ್ಯವಸ್ಥಾಪಕರ/ಸಹಾಯಕ ನಿರ್ದೇಶಕರು [ಬೋಧಕೇತರ] ಹುದ್ದೆಗಳಿಗೆ ಸ್ಥಾನಪನ್ನ ಬಡ್ತಿಯನ್ನು ಬಿಟ್ಟುಕೊಡಲು ಸಲ್ಲಿಸಿರುವ ಮನವಿಗಳನ್ನು ಸರ್ಕಾರದ ಆದೇಶ ಸಂಖ್ಯೆ: ಡಿಪಿಎಆರ್57ಎಸ್.ಆರ್.ಆರ್.2001 ದಿನಾಂಕ: 22–05–2002 ಮತ್ತು ಕರ್ನಾಟಕ ಸಿವಿಲ್ ಸೇವಾ [ಸಾಮಾನ್ಯ ನೌಕರಿ ಭರ್ತಿ] ನಿಯಮಗಳು–1977ರ ನಿಯಮ 4ಎ ರನ್ವಯ ಅಂಗೀಕರಿಸಲು ತೀರ್ಮಾನಿಸಿ, ಈ ಕೆಳಕಂಡಂತೆ ಆದೇಶ ಮಾಡಲಾಗಿದೆ.

**ಆದೇಶ:–**

ಈ ಕೆಳಕಂಡ ಅಧೀಕ್ಷಕರುಗಳು, ಪತ್ರಾಂಕಿತ ವ್ಯವಸ್ಥಾಪಕರ/ಸಹಾಯಕ ನಿರ್ದೇಶಕರು [ಬೋಧಕೇತರ] ಹುದ್ದೆಗಳಿಗೆ ಸ್ಥಾನಪನ್ನ ಬಡ್ತಿಯನ್ನು ಬಿಟ್ಟುಕೊಡಲು ಕೋರಿರುವುದನ್ನು ಪರಿಗಣಿಸಿ ಸರ್ಕಾರದ ಆದೇಶ ಸಂಖ್ಯೆ: ಡಿಪಿಎಆರ್57ಎಸ್.ಆರ್.ಆರ್.2001 ದಿನಾಂಕ:22–05–2002 ಮತ್ತು ಕರ್ನಾಟಕ ಸಿವಿಲ್ ಸೇವಾ [ಸಾಮಾನ್ಯ ನೌಕರಿ ಭರ್ತಿ] ನಿಯಮಗಳು–1977ರ ನಿಯಮ 4ಎ ರನ್ವಯ ಅಂಗೀಕರಿಸಿ ಅನುಮತಿಸಿದೆ.

| **ಕ್ರಮ ಸಂಖ್ಯೆ** | **ಜೇಷ್ಟತಾ ಸಂಖ್ಯೆ** | **ಬಡ್ತಿ ಹೊಂದಿದ ನೌಕರರ ಹೆಸರು/ಪದನಾಮ/ಕಛೇರಿ ಹೆಸರು ಶ್ರೀ / ಶ್ರೀಮತಿ** |
|---|---|---|
| 01 | 327 | ಡಿ.ಟಿ.ಮೀನಾಕುಮಾರಿ, ಅಧೀಕ್ಷಕರು, ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಛೇರಿ, ಉತ್ತರ ವಲಯ–3, ಬೆಂಗಳೂರು. |
| 02 | 387 | ಲಕ್ಷ್ಮಮ್ಮ.ಎಂ. ಅಧೀಕ್ಷಕರು, ಆಯುಕ್ತರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ನೃಪತುಂಗ ರಸ್ತೆ, ಬೆಂಗಳೂರು |
| 03 | 398 | ಎ.ಆರ್.ರಮೇಶ್, ಅಧೀಕ್ಷಕರು. ಉಪ ನಿರ್ದೇಶಕರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು ದಕ್ಷಿಣ ಜಿಲ್ಲೆ. |
| 04 | 400 | ಎಸ್ ವಿ.ಪ್ರಸನ್ನ, ಅಧೀಕ್ಷಕರು, ಉಪ ನಿರ್ದೇಶಕರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ,ಉಡುಪಿ ಜಿಲ್ಲೆ, ಉಡುಪಿ |
| 05 | 430 | ಎಲ್.ನಿಂಗಾನಾಯ್ಕ, ಅಧೀಕ್ಷಕರು, ಉಪ ನಿರ್ದೇಶಕರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ಚಿಕ್ಕಮಗಳೂರು ಜಿಲ್ಲೆ. |

ಬಡ್ತಿಯನ್ನು ಬಿಟ್ಟುಕೊಟ್ಟಿರುವ ಅಧಿಕಾರಿಗಳು ಒಂದು ವರ್ಷ ಅಥವಾ ಮುಂದಿನ ಬಡ್ತಿ ಪ್ರಕ್ರಿಯೆ ಇವುಗಳಲ್ಲಿ ಯಾವುದು ನಂತರವೋ ಅಲ್ಲಿಯವರೆವಿಗೆ ಬಡ್ತಿಗೆ ಅರ್ಹರಿರುವುದಿಲ್ಲ. **ಸಂಬಂಧಿಸಿದ ಕಛೇರಿ ಮುಖ್ಯಸ್ಥರು ಈ ಕುರಿತು ತಪ್ಪದೇ ಸೇವಾ ಪುಸ್ತಕದಲ್ಲಿ ನಮೂದಿಸಲು ತಿಳಿಸಿದೆ.**

**[ಮಾನ್ಯ ಆಯುಕ್ತರ ಆದೇಶದ ಮೇರೆಗೆ]**

**(ಸಿರಿಯಣ್ಣವರ ಲಲಿತ ಚಂದ್ರಶೇಖರ್]**
**ನಿರ್ದೇಶಕರು[ಆಡಳಿತ][ಹೆ.ಪ್ರ]**

ಇವರಿಗೆ:

1) ಸಂಬಂಧಿಸಿದ ಕಛೇರಿ ಮುಖ್ಯಸ್ಥರಿಗೆ,
2) ಸಂಬಂಧಿಸಿದ ನೌಕರರಿಗೆ,
3) ಈ ಕಛೇರಿಯ ಎಲ್ಲಾ ಶಾಖಾಧಿಕಾರಿಗಳಿಗೆ,
4) ಹಿರಿಯ ಸಹಾಯಕ ನಿರ್ದೇಶಕರು, ಇ–ಆಡಳಿತ ಶಾಖೆ, ಆಯುಕ್ತರ ಕಛೇರಿ ಬೆಂಗಳೂರು ಇವರಿಗೆ–ಈ ಜ್ಞಾಪನಾವನ್ನು ಇಲಾಖಾ ವೆಬ್ಸೈಟ್–www.schooleducation.kar.in "ನಲ್ಲಿ ಪ್ರಕಟಿಸಲು ಸೂಚಿಸಿದೆ.